# ಪರಿಸರಪ್ರಿಯ ವಸ್ತ್ರಾಭರಣ



ಎಐ ಚಿತ್ರ

■ ರೂಪಾ

ಮೊದಲೆಲ್ಲ ಕೆಲವು ಹಬ್ಬಗಳಿಗೆ ಮಾತ್ರ ಸೀಮಿತವಾಗಿದ್ದ ಬಟ್ಟೆ ಖರೀದಿ ಈಗೀಗ ಸಾಮಾನ್ಯವೆಂಬಂತಾಗಿದೆ. ಬಟ್ಟೆಯೇನೋ ಖರೀದಿ ಮಾಡುತ್ತೇವೆ. ಬೇಕೆಂದಾಗ ಹಾಕಿಕೊಂಡು, ಹಳತೂ ಆಗುತ್ತವೆ. ಆದರೆ, ಹಳತಾದ ಬಟ್ಟೆಗಳನ್ನು ಮರುಬಳಕೆ ಮಾಡಲು ನಾನಾ ದಾರಿಗಳಿವೆ. ಈ ಮರುಬಳಕೆಯ ಫ್ಯಾಷನ್ ಮಾದರಿಯೇ ‘ಫ್ಯಾಬ್ರಿಕ್ ಜುವೆಲ್ಲರಿ’. ಹಳತೊ, ಹೊಸತೊ ಬಟ್ಟೆಗಳನ್ನು ಬಳಸಿ, ಚಂದದ ಆಭರಣಗಳನ್ನು ತಯಾರಿಸಿ ತೊಡಬಹುದು.

ಫ್ಯಾಷನ್ ಎಂದರೆ ಸ್ವಹಿತವಷ್ಟೆ ಅಲ್ಲ ಪರಿಸರದ ಹಿತವೂ ಅಡಗಿದೆ ಎಂಬ ಪರಿಕಲ್ಪನೆಯಲ್ಲಿಯೇ ಮೂಡಿದ ಹಲವು ಕಲ್ಪನೆಗಳಲ್ಲಿ ಈ ಫ್ಯಾಬ್ರಿಕ್ ಜುವೆಲ್ಲರಿಯೂ ಒಂದು. ಈಚೆಗೆ ಫ್ಯಾಬ್ರಿಕ್ ಜುವೆಲ್ಲರಿ ಟ್ರೆಂಡ್ ಆಗುತ್ತಿದೆ. ನೆಕ್ಲೇಸ್‌ನಿಂದ ಹಿಡಿದು, ಸೂಕ್ಷ್ಮ ಕುಸುರಿಯ ಬ್ರೇಸ್ಲೆಟ್‌ವರೆಗೆ ಫ್ಯಾಬ್ರಿಕ್ ಜುವೆಲ್ಲರಿಗಳಿವೆ.

ಮುಖ್ಯವಾಗಿ ಬಟ್ಟೆಗಳನ್ನು ಇಟ್ಟುಕೊಂಡು, ಮಣಿ, ದಾರಗಳು, ರಿಬ್ಬನ್, ಲೋಹಗಳು, ರಟ್ಟು, ಎಂಡಿಎಫ್ ಬೋರ್ಡ್‌ಗಳನ್ನು ಬಳಸಿ ಸಾಂಪ್ರದಾಯಿಕ, ವಿನೂತನ ಶೈಲಿಗಳೆರಡಲ್ಲಿಯೂ ಫ್ಯಾಬ್ರಿಕ್ ಆಭರಣಗಳನ್ನು ತಯಾರಿಸಲಾಗುತ್ತದೆ. ತೊಡಲು ಆರಾಮದಾಯಕವೆನಿಸುವ ಹಗುರವಾದ ಆಭರಣಗಳು. ದೈನಂದಿನ ಬಳಕೆಗೆ, ಆಫೀಸಿನ ಉಡುಗೆಗೆ ಸೂಕ್ತವೆನಿಸುತ್ತವೆ.

ಅಜ್ಜಿ, ಅಮ್ಮ, ಅಕ್ಕ, ಅಪ್ಪ ಹೀಗೆ ಪ್ರೀತಿಪಾತ್ರರು ತೊಟ್ಟು, ಬಿಟ್ಟ ಬಟ್ಟೆಗಳಿಂದ ಮಾಡಿದ ಆಭರಣಗಳನ್ನು ತೊಟ್ಟರೆ ಸಿಗುವ ಖುಷಿಯೇ ಬೇರೆ. ಅವರೊಂದಿಗಿನ ನೆನಪಿನ ಯಾನ ಆಭರಣದ ಜತೆಗೆ ಸಾಗುತ್ತದೆ.

ಹತ್ತಿ, ರೇಷ್ಮೆ, ಲಿನಿನ್, ಹೈಗ್ರೇಡ್ ಪಾಲಿಯೆಸ್ಟರ್ ಬ್ಲೆಂಡ್, ಆರ್ಗಾನಿಕ್ ಮತ್ತು ನೈಸರ್ಗಿಕ ನಾರುಗಳಿಂದ ಈ ಆಭರಣಗಳನ್ನು ತಯಾರಿಸಲಾಗುತ್ತದೆ. ಹಾಗಾಗಿ ಇವುಗಳು ‘ಪಾಕೆಟ್‌ಸ್ನೇಹಿ’ ಆಭರಣಗಳಾಗಿವೆ. ಈಗೀಗ ಮದುವೆ ಮನೆಯಲ್ಲಿ ‘ಹಳದಿ’ ಅಂದರೆ, ಅರಿಶಿನಶಾಸ್ತ್ರ ಅದ್ದೂರಿಯಾಗಿ ಮಾಡಲಾಗುತ್ತದೆ. ಆಪ್ತೇಷ್ಟರು ಮದುಮಗಳು ಹಾಗೂ ಮದುಮಗನ ತಲೆ ಮೇಲೆ ತುಸು ಎತ್ತರದಲ್ಲಿರಿಸಿದ ಸಾರಣಿಗೆ ಮೇಲೆ ಅರಿಶಿನ ನೀರನ್ನು ಸುರಿಯುತ್ತಲೇ ರಾಶಿ ಪ್ರೀತಿಯನ್ನು, ಹಾರೈಕೆಯನ್ನು ಸುರಿಯವ ಸಂಭ್ರಮವೂ ಮೇಳೈಸಿರುತ್ತದೆ.



ಈ ಸಮಾರಂಭದಲ್ಲಿ ‘ಫ್ಯಾಬ್ರಿಕ್ ಜುವೆಲ್ಲರಿ’ ತೊಡುವ ಸಂಪ್ರದಾಯ ಹೆಚ್ಚು ಚಾಲ್ತಿಯಲ್ಲಿದೆ. ಬೇರೆ ಆಭರಣಗಳು ತೊಟ್ಟಾಗ ಹಳದಿ ನೀರು ಅವುಗಳ ಮೇಲೆ ಬಿದ್ದು, ದುಬಾರಿ ಆಭರಣಗಳು ಹಾಳಾಗುವುದಲ್ಲದೇ, ಚರ್ಮದ ಅಲರ್ಜಿ ಕಾಣಿಸಿಕೊಳ್ಳಬಹುದು. ಆದರೆ, ಅಷ್ಟೇನೂ ದುಬಾರಿಯಲ್ಲದ ಈ ಬಟ್ಟೆಯ ಆಭರಣಗಳು ಒಪ್ಪೊತ್ತಿನ ಸಂಭ್ರಮಕ್ಕೆ ಹೇಳಿ ಮಾಡಿಸಿವೆ. ನಿಮ್ಮ ಅಜ್ಜಿ–ಪಿಜ್ಜಿಯ ಧಾರೆ ಸೀರೆಯ ಎಳೆಗಳನ್ನು ಇಟ್ಟುಕೊಂಡು ಮಾಡಿದ ಆಭರಣಗಳನ್ನು ತೊಟ್ಟರೆ, ಹಿರಿಯರ ಆಶೀರ್ವಾದ ಶುಭಕಾರ್ಯಕ್ಕೆ ದಕ್ಕಿದಂತಾಗುತ್ತದೆ.

ದೊಡ್ಡ ಗಾತ್ರದ ನೆಕ್ಲೇಸ್‌ಗಳಿಂದ ಹಿಡಿದು ಸೂಕ್ಷ್ಮ ಕುಸುರಿಯ ಚೋಕರ್‌ಗಳವರೆಗೆ ಫ್ಯಾಬ್ರಿಕ್ ಆಭರಣಗಳನ್ನು ನೋಡಬಹುದು. ಕಾಟನ್ ಸೀರೆಗೂ, ರೇಷ್ಮೆ ಸೀರೆಗೂ ಈ ಆಭರಣ ಹೊಂದಿಕೆಯಾಗುತ್ತದೆ. ಮಣಿಗಳು, ಮುತ್ತುಗಳನ್ನು ಸೇರಿಸಿ ಮಾಡಿದ ಚೋಕರ್‌ಗಳು ಈಗೀಗ ಸದ್ದು ಮಾಡುತ್ತಿವೆ. ಇಂಡೋ ವೆಸ್ಟರ್ನ್ ಶೈಲಿಯ ಬಟ್ಟೆಗಳಿಗೂ ಇವು ಹೊಂದಿಕೆಯಾಗುತ್ತವೆ.

ರೇಷ್ಮೆಯ ಎಳೆಗಳಿಂದ ಮಾಡಿದ ಫ್ಯಾಬ್ರಿಕ್ ಬಳೆಗಳಿಗೆ ಹೆಚ್ಚು ಬೇಡಿಕೆ ಇದೆ. ಅದಕ್ಕೆ ಸೂಕ್ತವೆನಿಸುವ ಕುಂದನ್ ಸೇರಿಸಿ, ಬಳೆಗಳಿಗೆ ದುಬಾರಿ ಲುಕ್ ನೀಡಲಾಗುತ್ತದೆ. ಉತ್ತರ ಭಾರತದ ಮದುವೆಗಳಲ್ಲಿ ಮದುಮಗಳು ಇಂಥ ಕುಂದನ್ ಹಾಗೂ ರೇಷ್ಮೆ ಎಳೆಗಳಿಂದ ಮಾಡಿದ ದೊಡ್ಡ ಗಾತ್ರದ ಫ್ಯಾಬ್ರಿಕ್ ಬಳೆಗಳನ್ನು ಮದುವೆ ಸಂದರ್ಭ ತೊಡುತ್ತಾರೆ.





ಚಿತ್ರಗಳು: ಸರೋಜಿನಿ ಹೊಂಬಾಳಿ

ಕಿವಿಯೋಲೆಗಳಲ್ಲಿ ತ್ರಿಭುಜ ಅಥವಾ ಪಿರಮಿಡ್, ಉದ್ದನೆ ಆಕಾರದಲ್ಲಿ ಇರುವ ಆಭರಣಗಳಿಗೆ ಹೆಚ್ಚು ಬೇಡಿಕೆ ಇದೆ. ಧೋರಿ ಜುಮ್ಕಾ, ಟೂ ಸ್ಟೆಪ್ಸ್ ಜುಮ್ಕಾ, ಬೀಡ್ಸ್ ಜುಮ್ಕಾ, ಟ್ವಿಂಕ್ಲಿಂಗ್ ಹೂಪ್ ಸ್ಟಡ್‌ಗಳಿಗೂ ಹೆಚ್ಚಿನ ಬೇಡಿಕೆ ಇದೆ. ವಿವಿಧ ಆಕಾರ ಮತ್ತು ಗಾತ್ರಗಳಲ್ಲಿ ಉಡುಪಿಗೆ ನೂತನ ಸ್ಪರ್ಶ ನೀಡಬಲ್ಲವು. ಫ್ಯಾಬ್ರಿಕ್ ಉಂಗುರಗಳು ಸಾಂಪ್ರದಾಯಿಕ ಲೋಹದ ಉಂಗುರಗಳಿಗೆ ಟ್ರೆಂಡಿ ಪರ್ಯಾಯವಾಗಿದ್ದು, ಆರಾಮದಾಯಕ, ಸೊಗಸಾದ ಆಯ್ಕೆಯಾಗಿವೆ.

ಫ್ಯಾಬ್ರಿಕ್ ಬಟ್ಟೆಯ ಆಭರಣಗಳು ತೆಳುವಾಗಿ, ಸೂಕ್ಷ್ಮವಾಗಿ ಇರಬಹುದು. ಅವುಗಳ ಸೂಕ್ತ ನಿರ್ವಹಣೆ ಮುಖ್ಯ. ಇಲ್ಲವಾದರೆ ಚೂಪಾದ ವಸ್ತುಗಳಿಗೆ ಸಿಲುಕಿ ಹರಿದುಹೋಗಬಹುದು. ಸತತವಾಗಿ ಉಪಯೋಗಿಸುವುದರಿಂದ ಬಟ್ಟೆಗಳು ಕೊಳೆಯಾಗುವಂತೆ, ಮಾಸಲಾಗುವ ಸಾಧ್ಯತೆ ಇರುತ್ತದೆ. ಸೌಮ್ಯ ಸೋಪಿನಿಂದ, ಮೃದುವಾದ ಒದ್ದೆ ಬಟ್ಟೆಯಿಂದ ಸ್ವಚ್ಛಗೊಳಿಸಬಹುದು. ಕಠಿಣ ರಾಸಾಯನಿಕಗಳ ಬಳಕೆ ತಪ್ಪಿಸಿ. ಚರ್ಮದ ಮೇಲೂ ರಾಸಾಯನಿಕಗಳು ಉಳಿಯುವುದರಿಂದ ಚರ್ಮದ ಸಮಸ್ಯೆ ಉಂಟಾಗಬಹುದು.

ತೇವಾಂಶ ಅಥವಾ ಅತಿಯಾದ ಶಾಖದಿಂದ ಆಭರಣಗಳು ಹಾನಿಯಾಗದಂತೆ ಜೋಪಾನವಾಗಿಡಿ. ಬಣ್ಣ ಮಸುಕಾಗುವಿಕೆ ಅಥವಾ ಬಟ್ಟೆಯ ಹಾನಿಯನ್ನು ತಡೆಗಟ್ಟಲು ಈಜು ಅಥವಾ ಸ್ನಾನ ಮಾಡುವ ಮೊದಲು ತೆಗೆದಿಡುವುದು ಉತ್ತಮ. ಏನೇ ಇರಲಿ; ಭಿನ್ನ ಬಟ್ಟೆಗಳಿಂದ ತಯಾರಾದ ಭಿನ್ನ ಆಭರಣಗಳನ್ನು ತೊಡುವ ಖುಷಿಯ ಮುಂದೆ ಬೇರೆ ಏನಿದೆ? ■